ಸಾಕ್ಷಿಯನ್ನು ದಿನಾಂಕ **21-03-2025** ರಂದು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು

<u>ಪಾಟೀ ಸವಾಲುಃ ಪ್ರತಿವಾದಿ ನಂ**.2**(ಎ) ದಿಂದ **2**(ಸಿ) ಪರ ಶ್ರೀ**.**ಎ ಪಿ ಕೆ ವಕೀಲರಿಂದಃ**-**</u>

ದಿನಾಂಕ 23-02-2022 ರಂದು ನಾನು ವಿಡಿಯೋ ಕಾನಫರನ್ಸ ಮೂಲಕ ಸಾಕ್ಷಿಯನ್ನು ಹೇಳಿದ್ದೆ ಎಂದರೆ ಸರಿ. ಜಮಖಂಡಿ ನಗರ ಠಾಣೆ ಕ್ರೈಂ ನಂ.86/2012 ರಲ್ಲಿ ಮೃತ್ಯುಪತ್ರ ಪರೀಕ್ಷೆ ಮಾಡಿ ಅಭಿಪ್ರಾಯ ನೀಡಲು ಬಂದಿತ್ತು. ಸದರಿ ಕ್ರೈಂ ನಂ.86/2012 ರಲ್ಲಿ ನಾನು ಸಾಕ್ಷಿ ಹೇಳಿದ್ದೇನೆ. ಸಾಕ್ಷಿ ಮುಂದುವರೆದು ಮುಖ್ಯ ವಿಚಾರಣೆ ಮಾತ್ರ ಆಗಿದೆ ಎಂದು ಹೇಳುತ್ತಾರೆ. ಕ್ರೈಂ ನಂ.86/2012ರ ಸಿಸಿನಂ.24/2016 ಇರುತ್ತದೆ. ಪಾಟೀಸವಾಲಿಗಾಗಿ ನನ್ನನ್ನು ಇನ್ನುವರೆಗೂ ಕರೆದಿಲ್ಲ. ನಾನು ಪರಿಣಿತ ಎಂದು ಹೇಳಲು ನ್ಯಾಶನಲ್ ಇನ್ಸಟಿಟ್ಯೂಟ್ ಆಫ್ ಕ್ರಿಮಿನಾಲಜಿ ಮತ್ತು ಫಾರನ್ಸಿಕ್ಸ ಸಂಸ್ಥೆ ಹೊಸದೆಹಲಿಯಲ್ಲಿ ನನ್ನ ತರಬೇತಿ ಆಗಿದೆ. 2004 ರಿಂದ 2012ರವರೆಗೆ ನಾನು ಹಿರಿಯ ಪರಿಣಿತರೊಂದಿಗೆ ದಾಖಲಾತಿಗಳನ್ನು ಪರೀಕ್ಷೆ ಮಾಡಿ ಅಭಿಪ್ರಾಯ ನೀಡಲು ಸಹಾಯ ಮಾಡಿದ್ದೇನೆ. ಸದರಿ ತರಬೇತಿಯನ್ನು ಹೊರತುಪಡಿಸಿ ನಾನು ಬೇರೆ ಯಾವುದೇ ಶಿಕ್ಷಣ ಪಡೆದಿಲ್ಲ.

ಸದರಿ ಹೋಲಿಕೆಯನ್ನು ವಿಡಿಯೋ ಸ್ಪೆಕ್ಟರಲ್ ಕಂಪ್ಯಾರಿಸನ್, ಪಿರಿಯೋಸ್ಕೊಪಿಕೋ ಮೈಕ್ರೊವಾಚರ್ ಮುಂತಾದ ಉಪಕರಣಗಳ ಮುಖಾಂತರ ಮಾಡಿದ್ದೇನೆ ಎಂದು ನನ್ನ ಮುಖ್ಯ

ವಿಚಾರಣೆಯಲ್ಲಿ ಹೇಳಿದ್ದೇನೆ ಎಂದರೆ ಸರಿ. ಸಹಿಗಳ ಪರೀಕ್ಷೆ ಮಾಡಲು ಕೇವಲ ಕಂಪೇರಿಜನ್ (ಹೋಲಿಕೆ) ವಿಧಾನ ಮಾತ್ರ ಇದೆ. ವೈಯಕ್ತಿಕ ಕೈಬರಹಗಳನ್ನು ಹೋಲಿಕೆ ಮಾಡಿ ನಾವು ಪರೀಕ್ಷೆ ಮಾಡಿ ಅಭಿಪ್ರಾಯ ನೀಡುತ್ತೇವೆ. ವಿಡಿಯೋ ಸ್ಪೆಕ್ಟರಲ್ ಕಂಪ್ಯಾರಿಸನ್ ಮೂಲಕ ಸಹಿಗಳನ್ನು ಎನಲಾರ್ಜ (ವಿಸ್ತರಿಸಿ) ಮಾಡಿ ವೈಯಕ್ತಿಕ ಕೈಬರಹಗಳನ್ನು ಹೋಲಿಕೆ ಮಾಡಿ ಅಭಿಪ್ರಾಯ ನೀಡುತ್ತೇವೆ. ಸಾಮಾನ್ಯವಾಗಿ ಒಬ್ಬ ವ್ಯಕ್ತಿಯ ಸಹಿಗಳು ವಯಸ್ಸಿನ ಆಧಾರದ ಮೇಲೆ ಸ್ವಾಭಾವಿಕವಾಗಿ ವ್ಯತ್ಯಾಸ ಕಂಡು ಬರುತ್ತದೆ. ಸಾಮಾನ್ಯವಾಗಿ ಒಬ್ಬ ವ್ಯಕ್ತಿಯ ಕೈಗಳಿಗೆ ಪಾರ್ಶ್ವವಾಯು ಆದಾಗ ಸಹಿಗಳು ವ್ಯತ್ಯಾಸ ಆಗುತ್ತವೆ ಎಂದರೆ ಸಾಕ್ಷಿ ನಿಧಾನವಾಗಿ ಸಹಿ ಮಾಡುವುದರಿಂದ ವ್ಯತ್ಯಾಸ ಆಗುವುದಿಲ್ಲ ಎಂದು ಹೇಳುತ್ತಾರೆ. ಹೆಂಡ್ರಿಯವರ ಥಂಬ್ ಇಂಪ್ರೆಶನ್ ಬುಕ್ಕನ್ನು ನಾನು ಓದಿಲ್ಲ. ಸಾಮಾನ್ಯವಾಗಿ ಒಂದು ಮಗುವಿನಿಂದ ಯುವಕ, ಯುವಕನಿಂದ ಮಧ್ಯ ವಯಸ್ಸಿನಿಂದ, ಮಧ್ಯ ವಯಸ್ಸಿನಿಂದ ವೃದ್ಧಾಪ್ಯದವರೆಗೂ ಥಂಬ್ ಇಂಪ್ರೆಶನ್ ಬದಲಾವಣೆ ಆಗುವುದಿಲ್ಲ ಎಂದರೆ ಸರಿ. ನಾನು ಮೋದಿ ಮೆಡಿಕಲ್ ಜುರಿಸ್ಪ್ರಿಡನ್ಸನ್ನು ನಾನು ಓದಿಲ್ಲ. ಮೋದಿ ಮೆಡಿಕಲ್ ಜುರಿಸ್ಪ್ರಿಡನ್ಸದಲ್ಲಿ ಯಾವ ರೀತಿಯಾಗಿ ಥಂಬ್ ಇಂಪ್ರೆಶನ್ ತೆಗೆದುಕೊಳ್ಳಬೇಕು ಎಂದು ಬರೆದಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ನಾನು ಕೊಟ್ಟಂತಹ ಅಭಿಪ್ರಾಯದ ಪುಟ ಸಂಖ್ಯೆ 3 ರಲ್ಲಿ S1 to S4 ಎಂದು ನಮೂದಿಸಿದ್ದು ಎಂದರೆ ಸಾಕ್ಷಿ ಸಹಿಗಳನ್ನು ನಮೂದಿಸಿದ್ದೇನೆ ಎಂದು ಹೇಳುತ್ತಾರೆ. ನಾನು ಹೆಬ್ಬೆರಳಿನ ಗುರುತನ್ನು ಪರೀಕ್ಷಿಸಿಲ್ಲ. ಸಾಕ್ಷಿ ಮುಂದುವರೆದು ನೋಂದಣಾಧಿಕಾರಿಗಳ ಕಚೇರಿಯಿಂದ ಬಂದಂತಹ ಥಂಬ್ ಇಂಪ್ರೆಶನ್ ರಜಿಸ್ಟರನಲ್ಲಿರುವ ಸಹಿಗಳನ್ನು ಪರೀಕ್ಷಿಸಿದ್ದೇನೆ ಎಂದು ಹೇಳುತ್ತಾರೆ. ಪೋಲಿಸರಿಂದ ಮೂರು ದಾಖಲಾತಿಗಳು ಬಂದಿದ್ದವು. ಅವು ಎಂದರೆ ಮೃತ್ಯುಪತ್ರ, ಮುಂದುವರೆದ ಮೃತ್ಯುಪತ್ರ ಮತ್ತು ಒಪ್ಪಿತ ಸಹಿ ಇರುವ ಅಡಮಾನ ಪತ್ರ ಬಂದಿದ್ದವು. ಅಡಮಾನ ಪತ್ರ ಯಾವ ಬ್ಯಾಂಕಿನದು ಎಂದು ನನಗೆ ಗೊತ್ತಿಲ್ಲ. ಅಡಮಾನ ಪತ್ರದಲ್ಲಿ ಇರುವ ಸಹಿಗಳು ಮತ್ತು ಮೃತ್ಯುಪತ್ರದಲ್ಲಿ ಇರುವಂತಹ ಸಹಿಗಳನ್ನು ಹೋಲಿಕೆ ಮಾಡಿದ್ದೀರಿ ಎಂದರೆ ಸಾಕ್ಷಿ ಪ್ರಶ್ನಿತ ಸಹಿಗಳೊಂದಿಗೆ ಹೋಲಿಕೆ ಮಾಡಿದ್ದೇನೆ ಎಂದು ಹೇಳುತ್ತಾರೆ. ಮೃತ್ಯುಪತ್ರದಲ್ಲಿ ಇರುವ ಸಹಿಗಳನ್ನು ಮತ್ತು ಅಡಮಾನ ಪತ್ರದಲ್ಲಿ ಇರುವ ಸಹಿಗಳನ್ನು ಹೋಲಿಕೆ ಮಾಡಿದ್ದೇನೆ. ಅಡಮಾನ ಪತ್ರದಲ್ಲಿ ಇರುವ ಸಹಿಗಳು ಯಾವ ವರ್ಷದ ಸಹಿಗಳು ಎಂದರೆ ಸಾಕ್ಷಿ ಅಡಮಾನ ಪತ್ರದಲ್ಲಿ 2007 ಎಂದು ಬರೆದಿದ್ದಾರೆ ಎಂದು ಹೇಳುತ್ತಾರೆ. ಅಡಮಾನ ಪತ್ರದಲ್ಲಿ ಬ್ಯಾಂಕಿನ ಪತ್ರದೊಂದಿಗೆ ಇಂತಹ ದಾಖಲಾತಿಗಳು ಇವೆ ಎಂದು ನಮಗೆ

ಬಂದಿಲ್ಲ ಎಂದರೆ ಸರಿ. ಸಾಕ್ಷಿ ಮುಂದುವರೆದು ನಮಗೆ ತನಿಖಾಧಿಕಾರಿ ಕಳುಹಿಸಿಕೊಟ್ಟಿದ್ದಾರೆ ಎಂದು ಹೇಳುತ್ತಾರೆ. ಒಪ್ಪಿತ ಸಹಿಗಳು ಮತ್ತು ಪ್ರಶ್ನಿತ ಸಹಿಗಳು ಹೋಲಿಕೆ ಆಗದಿದ್ದರೆ, ಹೋಲಿಕೆ ಆಗಿಲ್ಲ ಎಂದು ಕೊಡುತ್ತೇವೆ ಎಂದರೆ ಸರಿ. ಕೇವಲ ಹೊಂದಾಣಿಕೆ ಆಗಿಲ್ಲ ಎನ್ನುವ ಅಭಿಪ್ರಾಯ ಕೊಡಲು ಮಾತ್ರ ಅಧಿಕಾರ ಇದೆ ಎಂದರೆ ಸರಿಯಲ್ಲ. ಪೋಲಿಸರು ನಮಗೆ ದಾಖಲಾತಿಗಳನ್ನು ಕಳುಹಿಸಿಕೊಟ್ಟಾಗ ಅದು ನಕಲಿ ಸಹಿಗಳು ಎಂದು ಅಭಿಪ್ರಾಯ ನೀಡಲು ಕೇಳಿರುವುದಿಲ್ಲ. ನಾನು ಅಧಿಕಾರ ವ್ಯಾಪ್ತಿಯನ್ನು ಮೀರಿ ಸಹಿಗಳು ನಕಲಿ ಇವೆ ಎಂದು ಅಭಿಪ್ರಾಯ ನೀಡಿದ್ದೇನೆ ಎಂದರೆ ಸರಿಯಲ್ಲ. ಅಡಮಾನ ಪತ್ರದಲ್ಲಿರುವ ಸಹಿ ಸುಶೀಲಾ ಸಿಂಗೆ ಇವರಿಗೆ ಸಂಬಂಧಪಟ್ಟ ಸಹಿ ಅಲ್ಲ ಎಂದರೆ ಸಾಕ್ಷಿ ನನಗೆ ಅದರ ಬಗ್ಗೆ ಗೊತ್ತಿಲ್ಲ, ತನಿಖಾಧಿಕಾರಿಗಳು ಕಳುಹಿಸಿಕೊಟ್ಟಿದ್ದಕ್ಕೆ ಮಾತ್ರ ನಾವು ಅಭಿಪ್ರಾಯ ನೀಡಿದ್ದೇವೆ ಎಂದು ಹೇಳುತ್ತಾರೆ.

<u>ಮರುವಿಚಾರಣೆ ಇಲ್ಲ.</u>

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸರಿ ಅದೆ.

ಸಹಿ/-
ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು,
ಮತ್ತು ಜೆ.ಎಮ್.ಎಫ್.ಸಿ. ಜಮಖಂಡಿ.